ವಿದ್ವಾಂಸರಾಗಿರುವ ಬಿ. ಜನಾರ್ದನ ಭಟ್ ಕಥೆಗಾರ, ವಿಮರ್ಶಕ, ಕಾದಂಬರಿಕಾರ. ಬಹುಭಾಷಾ ಪಾಂಡಿತ್ಯ ಸಾಧಿಸಿರುವ ಅವರು ಉಡುಪಿಯ ಬೆಳ್ಮಣ್‌ನವರು. 'ದಕ್ಷಿಣ ಕನ್ನಡದ ಶತಮಾನದ ಕಾವ್ಯ', 'ದಕ್ಷಿಣ ಕನ್ನಡದ ಶತಮಾನದ ಕತೆಗಳು', 'ಉಡುಪಿ ಜಿಲ್ಲೆಯ ಶತಮಾನದ ಕತೆಗಳು', 'ಉತ್ತರಾಧಿಕಾರ ಹಸ್ತಾಂತರ', 'ಮೂರು ಹೆಜ್ಜೆ ಭೂಮಿ', 'ಕಲ್ಲುಕಂಬವೇರಿದ ಹುಂಬ', 'ಅನಿಕೇತನ' ಸೇರಿದಂತೆ ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.

ಯಾಕೆಂದರೆ ಅದರ ಆಶಯ ಬ್ರಿಟಿಷರು ಚಾಣಕ್ಯನಂತೆ ಅಧಿಕಾರವನ್ನೊಲ್ಲದೆ ದೂರನಡೆದುಬಿಟ್ಟರು ಎನ್ನುವುದಾಗಿತ್ತು. 1862- 1870ರ ಬೌರಿಂಗ್ ಆಡಳಿತದ ಅವಧಿಯಲ್ಲಿಯೇ, ಒಡೆಯರ ದತ್ತುಪುತ್ರ ಹತ್ತನೆಯ ಚಾಮರಾಜ ಒಡೆಯರಿಗೆ 18 ತುಂಬಿದಾಗ ಅಧಿಕಾರ ಹಸ್ತಾಂತರ ಮಾಡುವುದೆಂದು ನಿಶ್ಚಯವಾಗಿತ್ತು. ಹಾಗಾಗಿ ನಂತರ ಬ್ರಿಟಿಷರು ಇದನ್ನು ಪ್ರಕಟಿಸಲು ಒಪ್ಪಿಗೆ ನೀಡಿದರು – ಎಂದು ಊಹಿಸಬಹುದೆ?

'ಮುದ್ರಾ ರಾಕ್ಷಸ' ನಾಟಕದಲ್ಲಿ ಚಾಣಕ್ಯನು ಮುದ್ರೆಯುಂಗುರದ ಸಹಾಯದಿಂದ ರಾಕ್ಷಸನನ್ನು ತನ್ನ ವಶ ಮಾಡಿಕೊಳ್ಳುವುದರ ಕಡೆಗೆ ಒತ್ತು ಕೊಡಲಾಗಿದೆ. ಆದರೆ, 'ಮುದ್ರಾಮಂಜೂಷ' ದಲ್ಲಿ ವಿಸ್ತಾರವಾದ ಪೂರ್ವಕಥೆ ಇದೆ. ಚಮತ್ಕಾರ, ತಂತ್ರ-ಪ್ರತಿತಂತ್ರಗಳಿದ್ದರೂ ಸನಾತನ ಧರ್ಮ ರಕ್ಷಣೆಗಾಗಿ ಚಂದ್ರಗುಪ್ತನನ್ನು ಪಟ್ಟಾಭಿಷಿಕ್ತನನ್ನಾಗಿ ಮಾಡುವುದು, ಅವನಿಗೆ ಅಮಾತ್ಯ ರಾಕ್ಷಸನ ಸಹಕಾರ ಸಿಗುವಂತೆ ಮಾಡುವುದು ಇಲ್ಲಿನ ಉದ್ದೇಶವಾಗಿದೆ. ಹೀಗೆ, 'ಮುದ್ರಾ ರಾಕ್ಷಸ' ನಾಟಕದ ವಸ್ತುವನ್ನು ಆಯ್ದುಕೊಂಡು ಕವಿಯು, ಮೂಲವನ್ನು ವಿಸ್ತರಿಸಿದ್ದಾನೆ. ಹಾಗಾಗಿ ಇದು ಯಾವುದೇ ಒಂದು ಕೃತಿಯ ಯಥಾವತ್ತಾದ ಅನುವಾದವಾಗಿರದೆ, ಹಲವು ಆಕರಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ತನ್ನದೇ ಆದ ರೀತಿಯಲ್ಲಿ ಸಾದರಪಡಿಸಿದ ಸ್ವತಂತ್ರ ಕೃತಿಯಾಗಿದೆ.

ಈ ಕೃತಿಯಲ್ಲಿ ಬುಧ, ಗುರು ಮತ್ತು ಶುಕ್ರವಾರ ಈ ಮೂರು ದಿನಗಳಂದು ಯುದ್ಧ ನಡೆಯಿತೆಂದು ಕೃತಿಕಾರ ಹೇಳಿದ್ದಾರೆ. ನಾಲ್ಕನೆಯ ಮೈಸೂರು ಯುದ್ಧದ ಕೊನೆಯ ದಾಳಿ, ಶ್ರೀರಂಗಪಟ್ಟಣದ ಮೇಲೆ ಮೇ 2, 3 ಮತ್ತು 4 – 1799 ಈ ದಿನಗಳಂದು ನಡೆದು, ಮೇ 4 ರಂದು ಟಿಪ್ಪು ಸುಲ್ತಾನರ ವಧೆಯಾಯಿತು.

ಮೂಲ ಕಥೆಯು ಪಾಟಲೀಪುರದಲ್ಲಿ ನಡೆದದ್ದಾದರೂ ಇಲ್ಲಿ ಮೈಸೂರು ಶ್ರೀರಂಗಪಟ್ಟಣದ ಸುತ್ತಮುತ್ತಲಿನ ವಾತಾವರಣವಿದೆ. ನಗರದ ಬ್ರಾಹ್ಮಣರು ದ್ರಾವಿಡ ಭಾಷೆಗಳಲ್ಲಿ ಮಾತನಾಡುವುದು, ಮಳವಳ್ಳಿ, ಹೊನ್ನಗಟ್ಟಿ, ಚೆನ್ನಪಟ್ಣ ಮೊದಲಾದ ಊರುಗಳನ್ನು ಸಾಂದರ್ಭಿಕವಾಗಿ ಹೆಸರಿಸುವುದು, ಜನರು ಮಾತನಾಡುವಾಗ - ಎಲೈ ಬುದ್ಧೀ, ಜೀಯಾ, ಅಯ್ಯಾ, ಅಮ್ಮಣ್ಣಿಯವರೇ ಎಂದು ಸಂಬೋಧಿಸುವುದು, ಶಿವ ಶಿವಾ, ಶಾಬಾಸು - ಶಾಬಾಸು ಎಂದು ಉದ್ಗರಿಸುವುದು ಮೊದಲಾದವುಗಳನ್ನು ಗ್ರಂಥದ ಎಲ್ಲೆಡೆ ಕಾಣಬಹುದು.

ಪರ್ವತರಾಜನು ನಂದರನ್ನು ಸೋಲಿಸಲು ತನ್ನ ಕಡೆಯ ಹೂಣ ಚೀಣ ಕಿರಾತಕಾಧಿಪತಿಗಳನ್ನು ಸರಯೂ ಸಂಗಮದಿಂದ ಹೋಗಿ ಮುತ್ತಿಗೆ ಹಾಕಲು ಸೂಚಿಸುತ್ತಾನೆ. ಸ್ವತಃ ಗಂಗಾಸಂಗಮವನ್ನು ನಾವೆಗಳಲ್ಲಿ ದಾಟಿ ಪಾಟಲಿಪುತ್ರಕ್ಕೆ ಮುತ್ತಿಗೆ ಹಾಕುತ್ತಾನೆ. ಗಂಗಾನದಿಯು ಸೋನ್ ನದಿಯನ್ನು (ಈ ಕೃತಿಯಲ್ಲಿ ಶೋಣಭದ್ರಾನದಿ) ಪಾಟಲೀಪುತ್ರದ ಬಳಿ ಸೇರಿಸಿಕೊಳ್ಳುತ್ತದೆ. ಶ್ರೀರಂಗಪಟ್ಟಣದಲ್ಲಿಯೂ ಸಂಗಮವಿರುವುದು ಮತ್ತು ಬ್ರಿಟಿಷ್ ಸೇನೆ ಆರ್ಥರ್ ವೆಲ್ಲೆಸ್ಲಿಯ ದಂಡನಾಯಕತ್ವದಲ್ಲಿ ಮರಾಠರು ಮತ್ತು ನಿಜಾಮರ ಸಹಾಯ ಪಡೆದಿರುವುದನ್ನು ಹೋಲಿಸಬಹುದು. ಈ ಸೈನ್ಯಗಳು ನದಿ ದಾಟಿ ಶ್ರೀರಂಗಪಟ್ಟಣಕ್ಕೆ ದಾಳಿಮಾಡಿದವು.

ಸಮಕಾಲೀನ ವಿಚಾರಗಳ ಬಗ್ಗೆ ಕೃತಿಕಾರ ಅನೇಕ ವಿಚಾರಗಳನ್ನು ಹೇಳಿದ್ದು ಕುತೂಹಲಕಾರಿಯಾಗಿದೆ. ಭದ್ರಭಟಾದಿ ಸೈನಿಕರು ಚಂದ್ರಗುಪ್ತನ ಮೇಲೆ ಸಿಟ್ಟುಗೊಂಡು ಹೊರಟುಹೋಗಲು, ಚಾಣಕ್ಯನು ಆ ಅಧಿಕಾರಿಗಳ ಕೈಕೆಳಗಿನ ಸರದಾರರಿಗೆ ಬರಲು ಹೇಳಿ ಕಳುಹಿಸುತ್ತಾನೆ. ಆಗ ಬಂದವರು ಲಛ್ಮನೋಜಿ, ವಿಜಯಸಿಂಗು, ಯಶವಂತ ರಾವ್, ತುಲಜಾ ಖಂಡು, ಫತ್ತೆ ಬಹಾದ್ದೂರ್, ಮುಕುಂದ ಸ್ವಾಮಿ, ಹಿಮ್ಮತ್‌ಖಾನ್, ಸಿಂಧೂ ಕಾಕರ್, ಮಹತಾಪ್ ಜಂಗ್,